# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1560 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭಾ ಕ್ಷೇತ್ರ ಚುನಾಯಿತ) |
| ಉತ್ತರಿಸಬೇಕಾಗಿದ ದಿನಾಂಕ | : | 17-03-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು<br>ನಗರ ಯೋಜನೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನಗರ ಪ್ರದೇಶಗಳಲ್ಲಿ 24*7 ಕುಡಿಯುವ ನೀರಿನ ಯೋಜನೆ ಎಷ್ಟು ನಗರಗಳಲ್ಲಿ ಜಾರಿಗೆ ಬಂದಿದೆ; ಒಳಚರಂಡಿ (UGD) ಯೋಜನೆ ಪೂರ್ಣಗೊಳಿಸದ ನಗರಗಳ ಸಂಖ್ಯೆ ಎಷ್ಟು;</td><td>
<u>ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC):</u><br><br>
ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ - ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್)ದಡಿ 24X7 ಕುಡಿಯುವ ನೀರಿನ ಯೋಜನೆಯನ್ನು ಎಂಟು (8) ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ನಾಲ್ಕು (4) ನಗರಗಳಲ್ಲಿ 24X7 ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತರಲಾಗಿದೆ.<br><br>
ವಿಶ್ವ ಬ್ಯಾಂಕ್ ನೆರವಿನ - ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (KUWSMP) ಯೋಜನೆಯಡಿ ಈ ಕೆಳಕಂಡ ಮೂರು ನಗರಗಳಲ್ಲಿ 24x7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿ ವಿವರಗಳು ಕೆಳಕಂಡಂತಿವೆ.<br><br>
<table>
<tr><th>ನಗರ</th><th>ಕಾಮಗಾರಿ ಪ್ರಾರಂಭ ದಿನಾಂಕ</th><th>ಕಾಮಗಾರಿ ಪೂರ್ಣಗೊಳ್ಳುವ ದಿನಾಂಕ</th></tr>
<tr><td>ಬೆಳಗಾವಿ</td><td>15-06-2020</td><td>31.12.2026</td></tr>
<tr><td>ಕಲಬುರಗಿ</td><td>10-06-2020</td><td>30.06.2027</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>12-06-2020</td><td>30.06.2027</td></tr>
<tr><td colspan="2">ಒಟ್ಟು</td><td></td></tr>
</table>
ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಕಾರ್ಯಕ್ರಮ (NKUSIP)ದಡಿ ನಗರ ಪ್ರದೇಶಗಳಲ್ಲಿ 24x7 ಕುಡಿಯುವ ನೀರಿನ ಯೋಜನೆಗಳನ್ನು 3 ನಗರ / ಪಟ್ಟಣಗಳಲ್ಲಿ (ಇಳಕಲ್, ನಿಪ್ಪಾಣಿ ಮತ್ತು ಗೋಕಾಕ್) ಪೂರ್ಣ ಪ್ರಮಾಣದಲ್ಲಿ, 3 ನಗರ / ಪಟ್ಟಣಗಳಲ್ಲಿ (ಬೀದರ್, ಬಸವಕಲ್ಯಾಣ ಮತ್ತು ಶಹಬಾದ್) ಗಳಲ್ಲಿ ಬಾಗಶಃ ಜಾರಿಗೆ ಬಂದಿದೆ. ಪ್ರಸ್ತುತ ಸ್ಥಳೀಯ ಸಂಸ್ಥೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ.
</td></tr>
</table>

| | | |
|---|---|---|
| | | ನಗರ ಪ್ರದೇಶಗಳಲ್ಲಿ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಒಳಚರಂಡಿ (UGD) ಯೋಜನೆಯನ್ನು 15 ನಗರ / ಪಟ್ಟಣಗಳಲ್ಲಿ ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ವಿಜಯಪುರ, ರಾಯಚೂರು, ಕಲಬುರಗಿ, ಬೀದರ್, ರಾಣೆಬೆನ್ನೂರು, ಗೋಕಾಕ್, ರಬಕವಿ-ಬನಹಟ್ಟಿ, ಇಳಕಲ್, ಜಮಖಂಡಿ, ಹೊಸಪೇಟೆ, ಚಾಮರಾಜನಗರ, ಸಿಂಧನೂರು ಮತ್ತು ಹಾವೇರಿ ನಗರಗಳಲ್ಲಿ ಪೂರ್ಣಗೊಳಿಸಲಾಗಿದ್ದು, ಸಿಂಧನೂರು ಒಳಚರಂಡಿ ಯೋಜನೆಯಲ್ಲಿ ಕೆಲವು ಲೋಪ ದೋಷಗಳಿದ್ದು, ಅವುಗಳನ್ನು ಸರಿಪಡಿಸಬೇಕಾಗಿರುತ್ತದೆ.<br><br>**ಪೌರಾಡಳಿತ ನಿರ್ದೇಶನಾಲಯ:**<br><br>Interception and Diversion ಕಾಮಗಾರಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 229 ಸಿಎಸ್‌ಎಸ್ 2021(ಪಿ-1), ದಿನಾಂಕ: 30-12-2024 ರಂತೆ, ರಾಜ್ಯದ 275 ನಗರ ಸ್ಥಳೀಯ ಸಂಸ್ಥೆಗಳ ವಿಸ್ತೃತ ಯೋಜನಾ ವರದಿ ತಯಾರಿಸಲು (DPR) ರಾಜ್ಯ ಅಭಿಯಾನ ನಿರ್ದೇಶಕರ ವತಿಯಿಂದ ನಿಯಮಾನುಸಾರ ಕ್ರಮವಹಿಸಿ, ಪಿ.ಡಿ.ಎಂ.ಸಿ ಯನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಪ್ರಸ್ತುತ 52 ನಗರಗಳ ವಿಸ್ತೃತ ಯೋಜನಾ ವರದಿಗಳು ಅನುಮೋದನೆಗೊಂಡಿದ್ದು ಟೆಂಡರ್ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿರುತದೆ.<br><br>Procurement of Sewer Cleaning Vehicles ಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 229 ಸಿಎಸ್‌ಎಸ್ 2021 ಬೆಂಗಳೂರು, ದಿನಾಂಕ:30-12-2024 ರಲ್ಲಿ ರಾಜ್ಯದ 73 ನಗರ ಸ್ಥಳೀಯ ಸಂಸ್ಥೆಗಳಿಗೆ ತಲಾ ಒಂದರಂತೆ, ರೂ.35.00 ಲಕ್ಷಗಳ ವೆಚ್ಚದಲ್ಲಿ 73 ಸಂಖ್ಯೆ 4000 ಲೀ. ಸಾಮರ್ಥ್ಯದ Sewer Cleaning Vehicles ಗಳನ್ನು ಒದಗಿಸಲು ಕ್ರಿಯಾ ಯೋಜನೆಯು ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>Procurement of Cesspool Vehicles ಗೆ ಸಂಬಂಧಿಸಿದಂತೆ ಆದೇಶ ಸಂಖ್ಯೆ: ನಅಇ 5 ಸಿಎಸ್‌ಎಸ್ 2023 (ಪಿ-1), ದಿನಾಂಕ:02-11-2023 ರಲ್ಲಿ ರಾಜ್ಯದ 110 ನಗರ ಸ್ಥಳೀಯ ಸಂಸ್ಥೆಗಳಿಗೆ 147 ಸಂಖ್ಯೆ 3000 ಲೀ. ಸಾಮರ್ಥ್ಯದ Cesspool Vehicles ಗಳನ್ನು ಒದಗಿಸಲು ಕ್ರಿಯಾ ಯೋಜನೆಯು ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (KUWS&DB):** ರಾಜ್ಯದ ನಗರ ಪ್ರದೇಶಗಳಲ್ಲಿ (ಸ್ಥಳೀಯ ಸಂಸ್ಥೆ) ಕುಡಿಯುವ ನೀರಿನ ಯೋಜನೆಯನ್ನು ಒದಗಿಸುವುದರಲ್ಲಿ ಮಂಡಳಿಯು ಸಹ ಒಂದಾಗಿರುತ್ತದೆ. ಕ.ನ.ನೀ.ಸ ಮತ್ತು ಒಚ ಮಂಡಳಿ ವತಿಯಿಂದ ಇದುವರೆವಿಗೆ ತೀರ್ಥಹಳ್ಳಿ, ಅಳ್ನವರ, ಅಣ್ಣಿಗೆರೆ ಮತ್ತುಇಂಡಿ ನಗರ/ಪಟ್ಟಣಗಳಲ್ಲಿ 24x7 ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಿ ಜಾರಿಗೆ ತರಲಾಗಿದೆ. ಮಂಡಳಿ ವತಿಯಿಂದ ಪ್ರಸ್ತುತ 48 ಸಂಖ್ಯೆ ಒಳಚರಂಡಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದ್ದು ಸದರಿ ಯೋಜನೆಗಳು ಪ್ರಗತಿಯಲ್ಲಿವೆ. |
| ಆ) | ನಗರ ಪ್ರದೇಶಗಳಲ್ಲಿ ಬಡವರಿಗೆ ಮನೆ ನೀಡುವ ಯೋಜನೆಗಳಡಿ ಎಷ್ಟು ಮನೆಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಮನೆಗಳು ಬಾಕಿ ಉಳಿದಿವೆ: | **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ** ರಾಜ್ಯಾಧ್ಯಂತ ಬರುವ ನಗರ ಪ್ರದೇಶದ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಕೊಳಗೇರಿ ನಿವಾಸಿಗಳಿಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ 2016-17ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಒಟ್ಟು 1,80,253 ಮನೆಗಳನ್ನು ನಿರ್ಮಾಣ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಹಂತಗಳಲ್ಲಿ ಅನುಮೋದನೆ ದೊರಕಿರುತ್ತದೆ. ಅವುಗಳಲ್ಲಿ 1653 ಮನೆಗಳು ಕೇಂದ್ರದಿಂದ ಕಡಿತಗೊಂಡಿರುತ್ತದೆ. ಅದರಂತೆ, 178600 ಮನೆಗಳಲ್ಲಿ 129986 ಮನೆಗಳನ್ನು ಪ್ರಾರಂಭಿಸಿದ್ದು, 86,651 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 43335 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. 48614 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. |
| ಇ) | ರಾಜ್ಯದಲ್ಲಿ ಕೊಳಗೇರಿ ಅಭಿವೃದ್ಧಿ ಯೋಜನೆಗಳ ಪ್ರಗತಿ ಏನು: ಹಾಗೂ ಕಳೆದ ಮೂರು ವರ್ಷಗಳಲ್ಲಿ ಬೀದಿ ವ್ಯಾಪರಿಗಳಿಗೆ ಪರವಾನಗಿ ನೀಡಿರುವ ಸಂಖ್ಯೆ ಎಷ್ಟು? | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೊಳಗೇರಿ ಗುಣಲಕ್ಷಗಳನ್ನು ಹೊಂದಿರುವ ಕೊಳಚೆ ಪ್ರದೇಶಗಳನ್ನು ಗುರುತಿಸಿ, ಮಂಡಳಿಯ ಕಾಯ್ದೆಯಡಿ ಘೋಷಣೆ ಹೊರಡಿಸಿ, ಕೊಳಗೇರಿ ಸುಧಾರಣೆ ಯೋಜನೆಯಡಿ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ರಾಜ್ಯಾದ್ಯಂತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುಧಾಯ ಭವನ ಇತ್ಯಾಧಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗಿರುತ್ತದೆ. |

ಅದರಂತೆ, ಕೊಳಗೇರಿ ಸುಧಾರಣೆ ಯೋಜನೆಯಡಿ 2023-24 ಸಾಲಿನಿಂದ 2025-26ನೇ ಸಾಲಿನವರೆಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿಗೆ ಒಟ್ಟು ರೂ.106.25 ಕೋಟಿಗಳು ಮಂಜೂರು ಮಾಡಲಾಗಿದ್ದು, ಈ ಪೈಕಿ ರೂ.97.20 ಕೋಟಿಗಳ ವೆಚ್ಚ ಮಾಡಲಾಗಿರುತ್ತದೆ.

ದೀನಾನ್ ದಯಾಳ್ ಜನ್ ಆಜೀವಕ- ಶಹರಿ (ಪ್ರಾಯೋಗಿಕ) ಯೋಜನೆಯ ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ಉಪಘಟದಡಿ (SUSV) ಕಳೆದ ಮೂರು ವರ್ಷಗಳಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಪರವಾನಗಿ ನೀಡಿರುವ ಸಂಖ್ಯೆ ಈ ಕೆಳಕಂಡಂತಿರುತ್ತದೆ:

| ಕ್ರ. ಸಂ | ವರ್ಷ | DJAY-S ದತ್ತಾಂಶದಂತೆ ಮಾರಾಟ ಪ್ರಮಾಣ ಪತ್ರ (COV) ನೀಡಿರುವ ಸಂಖ್ಯೆ: |
|---|---|---|
| 01 | 2022-23 | 39,981 |
| 02 | 2023-24 | 14,254 |
| 03 | 2024-25 | 4,175 |
| **ಒಟ್ಟು** | | **58,140** |

ಕಡತ ಸಂಖ್ಯೆ:ನಅಇ 39 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು